ದಿನಾಂಕ: **25.01.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು **: 2** ಮತ್ತು **3** ನೇ ಪ್ರತಿವಾದಿಗಳ ಪರ ವಕೀಲರಿಂದ:

02. ಈ ದಾವೆಯಲ್ಲಿ ನನ್ನ ಅಣ್ಣನಾದ 3 ನೇ ಪ್ರತಿವಾದಿ ಚೆನ್ನಪ್ಪ ಏನು ತಕರಾರು ಸಲ್ಲಿಸಿದ್ದಾರೆಂದು ನಾನು ತಿಳಿದುಕೊಂಡಿಲ್ಲ. ದಾವಾ ಸ್ವತ್ತುಗಳ ಚೆಕ್ಕುಬಂದಿಯನ್ನು ನನಗೆ ಹೇಳಲು ಆಗುತ್ತದೆಯೇ? ಎಂದರೆ ಈಗ ಎಲ್ಲರೂ ಹೊಸಬರು ಬಂದಿರುವ ಕಾರಣ ಚೆಕ್ಕುಬಂದಿ ಹೇಳಲು ಆಗುವುದಿಲ್ಲ. ಸಾಕ್ಷಿಗೆ ಈಗ ದಾವಾ ಸ್ವತ್ತುಗಳ ಚೆಕ್ಕುಬಂದಿಗಳಲ್ಲಿ ಹೊಸದಾಗಿ ಬಂದಿರುವ ವ್ಯಕ್ತಿಗಳ ಹೆಸರುಗಳನ್ನು ತಿಳಿದುಕೊಂಡು ದಾವೆಯಲ್ಲಿ ಬರೆಯಿಸಲು ತೊಂದರೆ ಇತ್ತೇ? ಎಂದು ಕೇಳಿದ್ದು ಸಾಕ್ಷಿಯವರು ಐಟಂ ನಂ.1 ರ ದಕ್ಷಿಣ ದಿಕ್ಕಿಗೆ ನನ್ನ ಚಿಕ್ಕಪ್ಪ ವಿಶ್ವನಾಥಪ್ಪ ಇದ್ದರು, ಈಗ ಮೃತಪಟ್ಟಿದ್ದಾರೆ ಮತ್ತು ನನಗೆ ಆರು ಕಾಲು ಎಕರೆ ಹೊಲದ ಚೆಕ್ಕುಬಂದಿ ಮಾತ್ರ ಗೊತ್ತು ಎಂದು ಹೇಳಿದ್ದಾರೆ. ನನ್ನ ಅಣ್ಣಂದಿರಾದ 1 ರಿಂದ 5 ನೇ ಪ್ರತಿವಾದಿಗಳು ಇಸವಿ 2000 ಕ್ಕಿಂತ ಹಿಂದೆಯೇ ಮೌಖಿಕ ಪಾಲುವಿಭಾಗ ಮಾಡಿಕೊಂಡಿದ್ದಾರೆ ಎಂದರೆ 2009 ರಲ್ಲಿ ಭಾಗ ಮಾಡಿಕೊಂಡಿದ್ದಾರೆ. ದಾವಾ ಐಟಂ ನಂ. 4 ಸದರಿ ವಿಭಾಗದಲ್ಲಿ 4 ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿತ್ತು ಎಂದರೆ 4 ನೇ ಪ್ರತಿವಾದಿ ಅದನ್ನು ಮಾರಾಟ ಮಾಡಿದ್ದಾರೆ. 4 ನೇ ಪ್ರತಿವಾದಿ ಐಟಂ ನಂ. 4 ನ್ನು ಮಾರಾಟ ಮಾಡುವಾಗಲೇ ನನಗೆ ಆ ವಿಚಾರ ಗೊತ್ತಿತ್ತು ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯು ಐಟಂ ನಂ. 4 ನ್ನು ದಿನಾಂಕ 15.10.2010 ರಂದು ರೂ. 92 ಸಾವಿರ ಮೊತ್ತಕ್ಕೆ ಬಾಣದ ನಬೀಸಾಬ್ ತಂದೆ ಬಾಣದ ರಾಜಾಸಾಬ್ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನಾನು ದೃಢೀಕೃತ ದಾಖಲೆಗಳನ್ನು ಪಡೆದುಕೊಂಡಾಗಲೇ ಅದರ ಬಗ್ಗೆ ಗೊತ್ತಾಯಿತು. ಐಟಂ ನಂ. 2 ರ 64 ಸೆಂಟ್ಸ್ ವಿಸ್ತೀರ್ಣವನ್ನು ಪ್ರತಿವಾದಿಗಳು ತಲಾ 16 ಸೆಂಟ್ಸ್ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನಮಗೆ ಏನನ್ನೂ ಕೊಡದೇ ಅವರೇ ವಿಭಾಗ ಮಾಡಿಕೊಂಡಿದ್ದಾರೆ. ಐಟಂ ನಂ. 1 ರ 6 ಎಕರೆ 12 ಸೆಂಟ್ಸ್ ಜಮೀನನ್ನು 2, 3 ಮತ್ತು 5 ನೇ ಪ್ರತಿವಾದಿಗಳು ತಲಾ 2 ಎಕರೆ 4 ಸೆಂಟ್ಸ್ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನಮಗೆ ಭಾಗ ಕೊಡದೇ ಅವರೇ ವಿಭಾಗ ಮಾಡಿಕೊಂಡಿದ್ದಾರೆ. ಅವರೆಲ್ಲಾ ಹಿಸ್ಸೆ ಮಾಡಿಕೊಂಡು ಪ್ರತ್ಯೇಕವಾಗಿ ಸ್ವಾಧೀನ ಹೊಂದಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಅಕ್ಕ-ತಂಗಿಯರಿಗೆ ಕೊಡದೇ ಅವರೇ ಸಾಗುವಳಿ ಮಾಡುತ್ತಿದ್ದಾರೆ. ದಾವಾ ಐಟಂ ನಂ. 3 ರಲ್ಲಿರುವ ಮನೆ 5 ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿದೆ ಎಂದರೆ ಸೃಷ್ಟಿ ಮಾಡಿಕೊಂಡಿದ್ದಾರೆ. 4 ನೇ ಪ್ರತಿವಾದಿ ಐಟಂ ನಂ. 2 ರಲ್ಲಿ ಬಂದ 16 ಸೆಂಟ್ಸ್ ಹಿಸ್ಸೆಯಲ್ಲಿ 4 ಸೆಂಟ್ಸ್ ಜಮೀನನ್ನು ದಿನಾಂಕ 15.10.2010 ರಂದು ಸತ್ಯನಾರಾಯಣ ಬಿನ್ ಬಾಬುರಾವ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ದಾವೆ ಹಾಕಿದ ನಂತರವೇ ನನಗೆ ಈ ವಿಚಾರ ಗೊತ್ತಾಯಿತು.

03. ನನ್ನ ತಂದೆ 20 ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ನನ್ನ ತಂದೆ ತೀರಿಕೊಂಡ ಹಿಂದೆಯೇ ನನ್ನ ತಾಯಿ ಕೂಡ ಮೃತಪಟ್ಟರು. ನನ್ನ ಮದುವೆಯಾಗಿ ಸುಮಾರು 33 ವರ್ಷಗಳು ಕಳೆದಿವೆ. ನನ್ನ ತಂದೆ ತೀರಿಕೊಂಡ ಕೂಡಲೇ ನನ್ನ ಸಹೋದರರು ಪಾಲುವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನಮಗೆ ಮಾಹಿತಿ ಕೊಡದೇ ಅವರವರೇ ಮಾಡಿಕೊಂಡಿದ್ದಾರೆ. ಈಗ ಯಾವುದೇ ಅವಿಭಕ್ತ ಕುಟುಂಬ ಅಸ್ತಿತ್ವದಲ್ಲಿ ಇಲ್ಲದೇ ಇರುವುದರಿಂದ ನನಗೆ ಯಾವುದೇ ಪಾಲುವಿಭಾಗದ ಹಕ್ಕು ಇಲ್ಲವೆಂದರೆ ಸರಿಯಲ್ಲ. 2 ನೇ ಪ್ರತಿವಾದಿ ಈರಣ್ಣ ಮೃತಪಟ್ಟಿದ್ದು ಅವರ ವಾರಸುದಾರರು ಹುಬ್ಬಳ್ಳಿಯಲ್ಲಿ ವಾಸ ಮಾಡುತ್ತಾರೆ. 3 ನೇ ಪ್ರತಿವಾದಿ ಚಿನ್ನಪ್ಪ ಹಗರಿಬೊಮ್ಮನಹಳ್ಳಿ ಯಲ್ಲಿ ವಾಸ ಮಾಡುತ್ತಾರೆ. 4 ನೇ ಪ್ರತಿವಾದಿ ಪ್ರಕಾಶ್ ಮತ್ತು 5 ನೇ ಪ್ರತಿವಾದಿ ನಾಗರಾಜ ಹೂವಿನಹಡಗಲಿಯಲ್ಲಿ ವಾಸ ಮಾಡುತ್ತಾರೆ. 1 ರಿಂದ 5 ನೇ ಪ್ರತಿವಾದಿಗಳು ಯಾವಾಗಿನಿಂದ ಬೇರೆ ಬೇರೆಯಾಗಿ ವಾಸ ಮಾಡಲು ಪ್ರಾರಂಭಿಸಿದರು ಎಂದರೆ ಎಲ್ಲಾ ಪ್ರತಿವಾದಿಗಳು ಸರ್ಕಾರಿ ನೌಕರಿಯಲ್ಲಿದ್ದು ಬೇರೆ ಬೇರೆ ಕಡೆ ವಾಸ ಮಾಡುತ್ತಾರೆ ಮತ್ತು ನನಗೆ ಇದರ ಬಗ್ಗೆ 4 ವರ್ಷಗಳ ಹಿಂದೆ ಗೊತ್ತಾಯಿತು. ಅವರೆಲ್ಲಾ ಹಿಸ್ಸೆ ಮಾಡಿಕೊಂಡಾಗಿನಿಂದ ಬೇರೆ ಬೇರೆಯಾಗಿ ವಾಸ ಮಾಡುತ್ತಿರುವ ಬಗ್ಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಪ್ರಕಾಶ್ ನನ್ನನ್ನು ಪುಸಲಾಯಿಸಿ ಈ ದಾವೆ ಹಾಕಿಸಿದ್ದಾರೆ ಎಂದರೆ ನಾನೇ ಸ್ವಂತ ಬುದ್ಧಿಯಿಂದ ದಾವೆ ಹಾಕಿದ್ದೇನೆ. 4 ನೇ ಪ್ರತಿವಾದಿಯ ಚಿತಾವಣೆ ಮೇಲೆ ದಾವೆ ಹಾಕಿರುವ ಕಾರಣದಿಂದ ಆತ ಕ್ರಯ ಮಾಡಿದ್ದ ಆಸ್ತಿಯನ್ನು ಮೊದಲು ಈ ದಾವೆಯಲ್ಲಿ ಸೇರಿಸಿರಲಿಲ್ಲ ಎಂದರೆ ಸರಿಯಲ್ಲ 2 ಮತ್ತು 3 ನೇ ಪ್ರತಿವಾದಿಗಳು ತಕರಾರು ಸಲ್ಲಿಸಿದ ನಂತರವೇ ನಾನು 4 ನೇ ಪ್ರತಿವಾದಿ ಕ್ರಯ ಮಾಡಿದ ಆಸ್ತಿಯನ್ನು ದಾವೆಗೆ ಸೇರಿಸಿದೆ ಎಂದರೆ ಸರಿಯಲ್ಲ. 2 ರಿಂದ 5 ನೇ ಪ್ರತಿವಾದಿಗಳ ನಡುವೆ ಈಗಾಗಲೇ ಪಾಲುವಿಭಾಗ ಆಗಿರುವ ಕಾರಣ ನನಗೆ ಪುನಃ ಪಾಲುವಿಭಾಗ ಕೇಳಲು ಯಾವುದೇ ಹಕ್ಕು ಇಲ್ಲವೆಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.